<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**</u>

<u>**ಸಿಸಿ ಸಂಖ್ಯೆಃ 172/2025**</u>

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರುಃ**

1. ಪುಟ್ಟೇಸ್ವಾಮಿ.ಸಿ.ಎ ಬಿನ್ ಅದನಿಗೌಡ
2. ರಾಜಮ್ಮ.ಬಿ.ಎ ಉಃ ರಾಜಲಕ್ಷ್ಮೀ ಕೋಂ ಪುಟ್ಟೇಸ್ವಾಮಿ.ಸಿ.ಎ
3. ಚರಣ ಕುಮಾರ್.ಸಿ.ಪಿ ಬಿನ್ ಪುಟ್ಟೇಸ್ವಾಮಿ.ಸಿ.ಎ

<u>**ದೋಷಾರೋಪಣೆ**</u>

**ಶ್ರೀಮತಿ ಕುಸುಮ ವಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 21.01.2025 ರಂದು ಮಧ್ಯಾಹ್ನ ಸುಮಾರು 1.45 ರ ಸಮಯದಲ್ಲಿ ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣಾ ಸರಹದ್ದಿನ ಎ. ಚೋಳೇನಹಳ್ಳಿ ಗ್ರಾಮದಲ್ಲಿ ಆರೋಪಿಗಳು ಅವರ ಹೊಸಮನೆಯ ಪಕ್ಕದ ಜಾಗವನ್ನು ಯಾವುದೋ ಜೆಸಿಬಿಯಿಂದ ಕ್ಲೀನ್ ಮಾಡಿಸುತ್ತಿದ್ದಾಗ ಸಾಕ್ಷಿ.1 ರವರು ಅಲ್ಲಿಗೆ ಹೋಗಿ ಈ ಜಾಗ ನಮ್ಮದು ಏಕೆ ನ್ಮ ಸೈಟನ್ನು ಕ್ಲೀನ್ ಮಾಡಿಸುತ್ತಿದ್ದೀರಾ ಇದು ನಮ್ಮ ಸೈಟು ಎಂದು ಕೇಳಿದಾಗ 1ನೇ ಆರೋಪಿಯು ಸಾಕ್ಷಿ.1 ರವರನ್ನು ಕುರಿತು ಅವರು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ಸಾಕ್ಷಿ.1 ರವರಿಗೆ ಏನೋ ಬೋಳಿಮಗನೆ ಇದು ನಮ್ಮ ಸೈಟು ನೀನು ಯಾರು ಕೇಳೋಕೆ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಆರೋಪಿಗಳಾದ ನೀವು **ಭಾರತೀಯ ನ್ಯಾಯಾ ಸಂಹಿತೆ ಕಲಂಃ 352 ಸಹವಾಚಕ ಕಲಂ.3(5)** ರಡಿಯಲ್ಲಿ

ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

2) ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿತರಾದ ನೀವು ನಿಮ್ಮ ಸ್ವಇಚ್ಛೆಯಿಂದ ಆರೋಪಿಗಳು ಅವರ ಹೊಸಮನೆಯ ಪಕ್ಕದ ಜಾಗವನ್ನು ಯಾವುದೋ ಜೆಸಿಬಿಯಿಂದ ಕ್ಲೀನ್ ಮಾಡಿಸುತ್ತಿದ್ದಾಗ ಸಾಕ್ಷಿ.1 ರವರು ಅಲ್ಲಿಗೆ ಹೋಗಿ ಈ ಜಾಗ ನಮ್ಮದು ಏಕೆ ನ್ಮು ಸೈಟನ್ನು ಕ್ಲೀನ್ ಮಾಡಿಸುತ್ತಿದ್ದೀರಾ ಇದು ನಮ್ಮ ಸೈಟು ಎಂದು ಕೇಳಿದಾಗ 1 ನೇ ಆರೋಪಿಯು ಕೈಯಲ್ಲಿ ಹಿಡಿದಿದ್ದ ಕೋಲಿನಿಂದ ಸಾಕ್ಷಿ.1 ರವರ ತಲೆಗೆ ಹೊಡೆದು ರಕ್ತ ಗಾಯಮಾಡಿದ್ದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂಃ 115(2) ಸಹವಾಚಕ ಕಲಂ.3(5)** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

3) ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿತರಾದ ನೀವು ನಿಮ್ಮ ಸ್ವಇಚ್ಛೆಯಿಂದ 2 ಮತ್ತು 3 ನೇ ಆರೋಪಿತರಾದ ನೀವು ಸಾಕ್ಷಿ.1 ರವರ ಕೊರಳ ಪಟ್ಟಿ ಹಿಡಿದು ಎಳೆದಾಡಿ ಕೆಳಕ್ಕೆ ಕೆಡವಿಕೊಂಡು ಅವರಕಾಲಿನಿಂದ ತುಳಿದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂಃ 118(1) ಸಹವಾಚಕ ಕಲಂ.3(5)** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

4) ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ, ಆರೋಪಿತರಾದ ನೀವು ಸಾಕ್ಷಿ.1 ರವರಿಗೆಈ ದಿನ ಬುಕಿದ್ದೀಯಾ ಇನ್ನೊಂದು ದಿನ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿ, ಆ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯಾ ಸಂಹಿತೆ ಕಲಂಃ**

**351(2) ಸಹವಾಚಕ ಕಲಂ.3(5)** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **17.04.2026**

(ಶ್ರೀಮತಿ ಕುಸುಮ ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.